ರಾಜು ಅವರ ಆಸ್ಪತ್ರೆಗೆ ಹೋಗದೆ ಇದ್ದಿದ್ದರೆ, ಆರ್‌ಎಂಪಿ ಡಾಕ್ಟರ್ ಸುಬ್ಬರಾಯನಿಗೆ ಹೇಳುತ್ತಿದ್ದ ಮಾತುಗಳನ್ನು ಕೇಳಿಸಿಕೊಳ್ಳದೆ ಇದ್ದಿದ್ದರೆ ಇಂದಿನ ಹೈದರಾಬಾದಿನ ಪ್ರಯಾಣವೇ ಇರುತ್ತಿರಲಿಲ್ಲ.

ಗಂಡ ವೀರಯ್ಯನಿಗಿದ್ದ ಕೆಟ್ಟ ಚಟಗಳಿಂದಾಗಿ ನಲವತ್ತು ವರ್ಷಕ್ಕೇ ಲಕ್ವ ಹೊಡೆದು ಅವನ ಎಡಗಾಲು, ಎಡಗೈ ಬಿದ್ದು ಹೋಗಿತ್ತು. ಸತ್ಯವತಿಯಂತಹ ಬಡಬಗ್ಗರಿಗೆ ಅಮಲಾಪುರದ ಡಾಕ್ಟರ್ ರಾಜು ಅವರೇ ದಿಕ್ಕಾಗಿದ್ದರು.

“ಸುಬ್ಬರಾಯಾ... ದೇವರಂಥ ನನ್ನ ಮಿತ್ರನ ಪತ್ನಿಗೆ ಎರಡು ಕಿಡ್ನಿಗಳೂ ಕೆಟ್ಟುಹೋಗಿವೆ ಕಣಯ್ಯಾ... ಆ ದಂಪತಿ ಸಮಾಜಕ್ಕೆ ಅತ್ಯಗತ್ಯವಾಗಿ ಬೇಕಾದವರು. ಕಿಡ್ನಿ ಕೊಡಲು ಒಂದಿಬ್ಬರು ಮುಂದೆ ಬಂದಿದ್ದರು. ಆದರೆ, ಅವರು ಕೇಳಿದಷ್ಟು ಕೊಡುವ ಶಕ್ತಿ ಅವರಿಗಿಲ್ಲ. ನಾಲ್ಕೈದು ಲಕ್ಷವಾದ್ರೆ ಹೇಗಾದರೂ ಕೊಡಬಲ್ಲರು. ನಿನ್ನ ಗಮನದಲ್ಲಿ ಯಾರಾದ್ರೂ ಇದ್ರೆ ನೋಡು...”

“ನೀವು ಈಗ್ತಾನೆ ಹೇಳಿದೀರಲ್ಲ ಸಾರ್. ನಂಗೆ ಗೊತ್ತಿರೋರು ಒಂದಿಬ್ರು ಇದಾರೆ... ಕೇಳಿ ನೋಡ್ತೀನಿ...” ಎಂದ ಸುಬ್ಬರಾಯ. ಅವರ ಸಂಭಾಷಣೆ ಕೇಳಿಸಿಕೊಂಡ ಸತ್ಯವತಿ ಆಲೋಚನೆಯಲ್ಲಿ ಮುಳುಗಿದಳು. ಸುಬ್ಬರಾಯ ವೈದ್ಯರ ಕೊಠಡಿಯಿಂದ ಹೊರಬರುತ್ತಿದ್ದಂತೆ ಅವನನ್ನು ಪಕ್ಕಕ್ಕೆ ಕರೆದು ಹೇಳಿದಳು.

“ಸುಬ್ಬರಾಯಪ್ಪಾ... ಬಿಡುವು ಮಾಡಿಕೊಂಡು ಸ್ವಲ್ಪ ಮನೆಕಡೆ ಬಂದು ಹೋಗ್ತೀಯ?...”

“ವೀರಯ್ಯನಿಗೆ ಹೆಂಗೂ ಇಂಜೆಕ್ಷನ್ ಕೊಡ್ಬೇಕಲ್ಲಾ... ಸಾಯಂಕಾಲ ಬರ್ತೀನಿ ಬಿಡು...” ಎಂದ ಸುಬ್ಬರಾಯ.

ಸತ್ಯವತಿ ಮನೆಗೆ ಬಂದು ಸೇರಿದರೂ ಆಲೋಚನೆಗಳ ಸುನಾಮಿಯಿಂದ ಹೊರಬರಲಾಗಲಿಲ್ಲ.

ವೀರಯ್ಯ ಲಕ್ವ ಹೊಡೆದು ಮಂಚ ಹಿಡಿದಿದ್ದಾನೆ. ಮಕ್ಕಳು ನೋಡಿದರೆ ಇನ್ನೂ ಚಿಕ್ಕವರು. ಅತ್ತೆಮಾವ ನೋಡಿದರೆ ಮುದುಕರು. ಹೆಣ್ಣುಗಂಡು ಎಲ್ಲಾ ತಾನೆ ಆಗಿ ದುಡೀತಿದ್ರು ಮನೆ ನಡೆಯೋದು ಕಷ್ಟವಾಗ್ತಿದೆ. ವೀರಯ್ಯ ಗುತ್ತಿಗೆ ಆಧಾರದ ಮೇಲೆ ವ್ಯವಸಾಯ ಮಾಡ್ತೀನಿ ಅಂತ ಜಮೀನು ತೆಗೆದುಕೊಂಡಿದ್ದ. ಅದರ ಸಾಲ ಬೇರೆ ತಲೆಮೇಲೆ ಬೆಟ್ಟದಂತೆ ಕೂತಿದೆ. ದಿನ ಬೆಳಗಾದ್ರೆ ಸಾಲಕೊಟ್ಟವರು ಮನೆ ಬಾಗಿಲಿಗೆ ಬಂದು ಬಾಯಿಗೆ ಬಂದಂಗೆ ಮಾತಾಡಿ ನಾನಾ ರಂಪ ಮಾಡ್ತಿದಾರೆ.

ಮನೆ ಮೇಲೆ ಸಾಲ ಕೊಟ್ಟಿರೋ ಸಾಹುಕಾರ ಸಿದ್ದಯ್ಯ, ಕೋರ್ಟಿನ ಮೆಟ್ಟಿಲು ಹತ್ತಿಸಿದಾನೆ. ತಾನಾದರೋ ಕೂಲಿ ಕೆಲಸ, ಮನೇಲಿ ಮೆಷಿನ್ ತುಳಿಯೋದು, ಊಟದ ಎಲೆ ಹಚ್ಚೋದು ಇಷ್ಟೆಲ್ಲ ದುಡಿದ್ರೂ ಮಕ್ಕಳಿಗೆ ಒಂದು ಹೊತ್ತಿನ ಊಟ ಕೂಡ ಕೊಡೋದಿಕ್ಕೆ ಆಗ್ತಿಲ್ಲ. ಒಂದೊಂದು ಸಾರಿ ಒಂದು ಹಿಡಿ ಧಾನ್ಯ ಕೂಡ ಸಾಲ ಸಿಗ್ದೆ, ಉಪವಾಸ ಮಲಗಿದ ದಿನಗಳೂ ಉಂಟು. ಸತ್ಯವತಿಗೆ ಈ ನಡುವೆ ಜೀವನದ ಮೇಲೆ ವಿರಕ್ತಿ ಬರ್ತಿತ್ತು. ಎಲ್ಲರಿಗೂ ವಿಷ ಉಣಿಸಿ ಒಂದೇಸಲ ಸಾಯೋಣ ಅಂದ್ರೆ, ವಿಷ ಕೊಳ್ಳೋದಕ್ಕೂ ಕಾಸಿಲ್ಲದ ತನ್ನ ದುಃಸ್ಥಿತಿಗೆ ಕುಗ್ಗಿಹೋಗಿದ್ದಳು.

ಮುಕ್ತೇಶ್ವರ ಪ್ರೌಢಶಾಲೆಯಲ್ಲಿ ತನ್ನೊಡನೆ ಓದುತ್ತಿದ್ದವರೆಲ್ಲ ಕಾಲೇಜಿಗೆ ಸೇರಿದ್ದರು. ಸ್ಕೂಲಿಗೇ ಮೊದಲನೆಯವಳಾಗಿ ಪಾಸಾಗಿದ್ದ ತನ್ನನ್ನು ಚಟಗಳಿಗೆ ದಾಸನಾಗಿದ್ದ ವೀರಯ್ಯನಿಗೆ ಮಲತಾಯಿ ಮದುವೆ ಮಾಡಿಕೊಟ್ಟಾಗಲೂ, ಬಾಯಿ ಬಿಡಲಾಗದೇ ಅಪ್ಪ ಮೌನವಾಗಿ ಕಣ್ಣೀರು ಹಾಕಿದನೇ ಹೊರತು, ಮಗಳ ಬದುಕು ನಾಶವಾಗದಂತೆ ತಡೆಯಲು ಅಶಕ್ಯನಾಗಿದ್ದ.

ಅಮಲಾಪುರಕ್ಕೆ ಹತ್ತು ಕಿಲೋಮೀಟರ್ ದೂರದಲ್ಲಿದ್ದ ಮುಕ್ತೇಶ್ವರಕ್ಕೆ ಅವಳನ್ನು ಮದುವೆ ಮಾಡಿಕೊಡಲಾಗಿತ್ತು. ಗೋದಾವರಿ ದಂಡೆಯಲ್ಲೇ ಸತ್ಯವತಿಯ ಹೆಂಚಿನ ಮನೆ. ತಾತ ಮುತ್ತಾತರ ಕಾಲದ ಹಳೆಯ ಮನೆ... ಸೂರ್ಯಚಂದ್ರರ ಜೊತೆ ಸಹಜೀವನ. ರಾತ್ರಿಯಲ್ಲಿ ತೆಂಗಿನ ಮರಗಳ